ಸ್ಪಷ್ಟವಾದಂಥ ಒಂದು ನಿರ್ಧಾರವನ್ನು, ಈ ರಾಜ್ಯದ ಬಡಜನತೆಗೆ ಹೇಳಬೇಕಾಗಿದೆ ಅವರ ಹೊಟ್ಟೆಗೆ ಅನ್ನ ಮುಟ್ಟತಕ್ಕಂಥ ರೀತಿಯಲ್ಲಿ ಪಡಿತರ ಚೀಟಿ ವಿತರಣೆ ಮಾಡತಕ್ಕಂಥ ಕೆಲಸ ಆಗಬೇಕು ರೈತರ ಬಗ್ಗೆ, ಬಡವರ ಬಗ್ಗೆ ಮಾತನಾಡತಕ್ಕಂಥ ಈ ಸಮ್ಮಿಶ್ರ ಸರ್ಕಾರದ ಉಪಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈ ಸದನದಲ್ಲಿದ್ದು, ಅವರು ಒಂದು ನಿರ್ದಿಷ್ಟವಾದಂಥ ಹೇಳಿಕೆಯನ್ನು ಈ ಸದನಕ್ಕೆ ಕೊಡಬೇಕು ಎಲ್ಲಿಯವರೆಗೆ ಡಿಮ್ಯಾಂಡ್ ಸರ್ವೆ ಆಗುತ್ತಿದೆ? ಎಲ್ಲಿಯವರೆಗೆ ಅದನ್ನು ಮಾಡುತ್ತಾ ಹೋಗುತ್ತೀರಿ? ಇದು ಶೀರಾಮರೆಡ್ಡಿಯವರು ಮತ್ತು ಎಲ್ಲ ಸದಸ್ಯರೂ ಕೇಳತಕ್ಕಂಥ ಪಶ್ನೆ ಅದನ್ನು ಇಲ್ಲಿ ಜಬ್ಬಾರ್ ಖಾನೆ ಹೊನ್ನಾಳಿಯವರು ಕೇಳಿದ್ದಾರೆ ಇವತ್ತು ಈ ರಾಜ್ಯದ ಜನತೆಗೆ ಹೊಟ್ಟೆಗೆ ಅನ್ನವಿಲ್ಲ ಕೇವಲ ಸಮಾವೇಶದ ಮೂಲಕ, ಹೇಳಿಕೆ ಮೂಲಕ ಹೊಟ್ಟೆ ತುಂಬುವುದಿಲ್ಲ ಈ ಕಾರ್ಯಕಮದ ಬಗ್ಗೆ ಯಾವಾಗ ನಿರ್ಧಾರ ತೆಗೆದುಕೊಳ್ಳುತ್ತೀರಿ, ಯಾವಾಗ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು ಹೇಳಬೇಕು ಈ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು

ಶೀ ಜಿ ವಿ ಶೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಹಾಗೆ ನನ್ನದೂ ಒಂದು ಪಶ್ನೆ ಇದೆ

ಅಧ್ಯಕ್ಷರು ಇದರ ಬಗ್ಗೆ ಬಹಳ ಜನ ಮಾತನಾಡುವವರಿದ್ದಾರೆ ಆದ್ದರಿಂದ ಇದನ್ನು ಅರ್ಧ ಗಂಟೆ ಚರ್ಚೆಯಾಗಿ ನಾಳೆ ತೆಗೆದುಕೊಳ್ಳುತ್ತೇನೆ ಆಯಿತು, ಇದನ್ನು ಅರ್ಧ ಗಂಟೆ ಚರ್ಚೆಯನ್ನಾಗಿ ಕನ್ವರ್ಟ್ ಮಾಡೋಣ

ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡುವುದು

53(422) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಬ್ಬರಿ ಬೆಲೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಇ) ಇದುವರೆಗೂ ಕೊಬ್ಬರಿಗೆ ಬೆಂಬಲ ಬೆಲೆ ನೀಡಿರುವುದೆಷ್ಟು ?

ಶ್ರೀ ಶರಣ ಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಕೊಬ್ಬರಿಗೆ ಬೆಂಬಲ ಬೆಲೆಯನ್ನು ಪ್ರತಿ ವರ್ಷ ಕೇಂದ್ರ ಸರ್ಕಾರವು ನಿಗದಿ ಮಾಡುತ್ತದೆ 2006-07ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ 3840/- ಹಾಗೂ ಮಿಲ್ಲಿಂಗ್ ಕೊಬ್ಬರಿಗೆ ರೂ 3590/- ಗಳ ಬೆಂಬಲ ಬೆಲೆ ನಿಗದಿಪಡಿಸಿದೆ ರಾಜ್ಯ ಸರ್ಕಾರ ರೈತರ

ಹಿತದೃಷ್ಟಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ರೈತರು ತಂದ ಕೊಬ್ಬರಿಯನ್ನು ಟೆಂಡರ್ / ಹರಾಜು ಮುಖಾಂತರ ಗರಿಷ್ಟ ರೂ 4700 ಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾದಾಗ ವ್ಯತ್ಯಾಸದ ಹಣವನ್ನು ಪರಿಹಾರವಾಗಿ ಗರಿಷ್ಟ ರೂ 600–00 ರವರೆಗೆ ದಿನಾಂಕ 11/01/2007 ರಿಂದ 24/01/2007 ರವರೆಗೆ ನೀಡಿದೆ

ಇ) ಪರಿಹಾರ ಧನವನ್ನಾಗಿ ಗರಿಷ್ಟ ರೂ 600–00 ರವರೆಗೆ ನೀಡಲು, ಅವರ್ತ ನಿಧಿಯಿಂದ ರೂ 6 25 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

ಪ್ರಶ್ನೆ ಸಂಖ್ಯೆ 422

ಶೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ, ಇವರು ಬೆಂಬಲ ಬೆಲೆಯ ಬಗ್ಗೆ ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿದರೆ ಇದು ನಿಜಕ್ಕೂ ಅತ್ಯಂತ ಅಪಾಯಕಾರಿ ಬೆಳವಣಿಗೆ ಕೊಬ್ಬರಿ ಬೆಳೆವ ರೈತರಿಗೆ ಮತ್ತು ಕೊಬ್ಬರಿ ವ್ಯಾಪಾರಸ್ಥರಿಗೆ ಇವರಿಂದ ಯಾವ ರಕ್ಷಣೆಯೂ ಇಲ್ಲ ಪ್ರಾಮಾಣಿಕವಾಗಿ ಹೇಳುವುದಾದರೆ ಅವರು ನೆಲ ಕಚ್ಚಿದ್ದಾರೆ ಅವರು ಒಂದೇ ಸಮನೆ ಕೂಗುತ್ತಿದ್ದಾರೆ ಇವರ ಬಗ್ಗೆ ಸರ್ಕಾರದವರು ಬರೀ ಮಾತನಾಡುತ್ತಾರೆ, ಹೇಳುತ್ತಾರೆ, ಘೋಷಣೆ ಮಾಡುತ್ತಾರೆ ಇವರು ಏನು ಬೆಂಬಲ ಬೆಲೆಯನ್ನು ಕೊಟ್ಟಿದ್ದಾರೆ, ಎಷ್ಟು ಕೊಟ್ಟಿದ್ದಾರೆ, ಎಷ್ಟು ವರ್ಷದಿಂದ ಕೊಡುತ್ತಿದ್ದಾರೆ, ಯಾವ ರೀತಿ ಕೊಡುತ್ತಿದ್ದಾರೆ ? ಇವರ ಬಗ್ಗೆ ಯಾವುದೇ ಪ್ರಾಮಾಣಿಕ ಪಯತ್ನವಿಲ್ಲ ಆದ್ದರಿಂದ ಅವರನ್ನು ಉಳಿಸಲು ಏನು ವ್ಯವಸ್ಥೆ ಮಾಡಿದ್ದಾರೆ ಎನ್ನುವುದನ್ನು ತಾವು ಹೇಳಬೇಕು

ಶೀ ಶರಣಬಸಪ್ಪ ದರ್ಶನಾಪುರ್ ಸನ್ಮಾನ್ಯ ಅಧ್ಯಕ್ಷರೇ, ಕೊಬ್ಬರಿ ಬೆಲೆ ಕುಸಿದಂಥ ಸಂದರ್ಭದಲ್ಲಿ ಸರ್ಕಾರ ಆ ಭಾಗದ ಕೊಬ್ಬರಿ ಬೆಳೆಗಾರರಿಗೆ ದಿನಾಂಕ 11–01–2007 ರಿಂದ 24–01–2007ರವರೆಗೆ ಮಾರಾಟವಾಗಿರತಕ್ಕಂಥ ಕೊಬ್ಬರಿಗೆ ಪತಿ ಕ್ವಿಂಟಾಲ್‌ಗೆ 600 ರೂ ಗಳವರೆಗೆ difference amount ಕೊಡತಕ್ಕಂಥ ಕೆಲಸ ಮಾಡಿದ್ದೇವೆ ಈಗಾಗಲೇ ಸುಮಾರು ಒಂದು ಲಕ್ಷ ಕ್ವಿಂಟಾಲ್ ಖರೀದಿಯಾಗಿದ್ದು, 6 ಕೋಟಿ 25 ಲಕ್ಷ ರೂ ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ

ಶೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಗೊಂದಲದಿಂದಾಗಿ ಆ ಭಾಗದ ರೈತರು ನಾಶವಾಗಿದ್ದಾರೆ ಸಚಿವರು ಮೀಟಿಂಗ್ ಕರೆದು, ಡಿ ಸಿ ಯವರು 4,900 ರೂ ಗಳನ್ನು ಕೊಡುತ್ತಾರೆ ಎಂದು ಹೇಳಿದರು ಇನ್ನೊಂದು ಸಲ 4,775 ರೂ ಗಳನ್ನು ಕೊಡುತ್ತೇವೆ ಎಂದು ಡಿಕ್ಲೇರ್ ಮಾಡಿದರು ಮತ್ತೊಂದು ಸಲ, ನಾವು ಈ ಹೇಳಿಕೆಯನ್ನು ಮಾಡಿಯೇ ಇಲ್ಲ ಎಂದು ಹೇಳಿದರು ಆಮೇಲೆ ಉಪ ಮುಖ್ಯಮಂತಿಗಳು ಹೇಳಿಕೆ ಕೊಟ್ಟು, ನಾವು 600 ರೂ ಗಳನ್ನು ಸಬ್ಸಿಡೈಸ್ಡ್ ಮಾಡುತ್ತೇವೆ ಎಂದು

ಹೇಳಿದರು ಇವತ್ತು ಇವರು ಅಲ್ಲಿ ಕೊಬ್ಬರಿಯನ್ನು ಕೊಳ್ಳಬೇಕಾಗಿತ್ತು ಅಥವಾ ಇವರು ನಫೆಡ್‌ಗೆ ಮೊದಲೇ ಬರೆಯಬೇಕಾಗಿತ್ತು ಅದ್ಯಾವುದನ್ನೂ ತಾವು ಮಾಡಲಿಲ್ಲ ವರ್ತಕರು ಕೊಳ್ಳುವುದು, ಇವರು ದುಡ್ಡು ಕೊಡುವುದು ಎಂದು ಆಯಿತು ಹಿಂದೆ ನಾನು ಈ ಶಾಸನಸಭೆಯಲ್ಲಿ ಹೇಳಿದ್ದೆ, ನಂಬರ್ ಟೂನಲ್ಲಿ ಹೋಗುತ್ತಿದೆ, ತಿಪಟೂರು ಮಾರುಕಟ್ಟೆಯನ್ನು ಮುಚ್ಚುತ್ತೀರಿ, ನೀವು ನಿರ್ನಾಮ ಮಾಡುತ್ತಿದ್ದೀರಿ, ನಿಮ್ಮ ಎದುರಿಗೇ ಕುಳಿತುಕೊಂಡು, ನಾನು ನಂಬರ್ ಟೂನಲ್ಲಿ ಮಾಡುತ್ತೇನೆ ಎಂದು ಮಾತನಾಡುತ್ತಾರೆ, ನಿಮಗೆ ಮಂತಿಗಿರಿ ಮಾಡಲು ಶಕ್ತಿಯಿಲ್ಲ, ತಿಪಟೂರು ಮಾರುಕಟ್ಟೆ ನಾಶವಾಗಿ ಹೋಯಿತು, outside APMC ಕೊಬ್ಬರಿ ತುಂಬುತ್ತಿದ್ದಾರೆ ಎಂದು ನಾನು ಕಳೆದ ಅಧಿವೇಶನದಲ್ಲಿ ಹೇಳಿದ್ದೆ ತಾವು ರೆಕಾರ್ಡ್ ತೆಗೆಸಬೇಕು ಈಗ ಏನಾಗಿದೆ ಎಂದರೆ, entire trading community ಇವರಿಂದ ಆಚೆ ಉಳಿದು ಬಿಟ್ಟಿದೆ ಇಬ್ಬರೋ, ಮೂರು ಜನರೋ ತಿಪಟೂರಿನಲ್ಲಿ ಕೊಬ್ಬರಿ ಕೊಳ್ಳುವಂಥ ಸ್ಥಿತಿ ನಿರ್ಮಾಣವಾಗಿ ಹೋಯಿತು ಯಾರು regular business ಮಾಡುತ್ತಿದ್ದರು, ಅವರ್ಯಾರೂ ದಂಧೆ ಮಾಡುವ ಹಾಗಿಲ್ಲ ಈ ಇಬ್ಬರು ಮೂವರು ಜನರಿಗೆ constraint ಇದೆ ಒಂದು ಲಕ್ಷ ಕ್ವಿಂಟಾಲ್ ಕೊಬ್ಬರಿ ಬಂದರೆ, ಬಂಡವಾಳ ಹಾಕಿ ಅದನ್ನು ಕೊಳ್ಳುವಂಥ ವರ್ತಕ ಯಾರಿದ್ದಾನೆ ತಿಪಟೂರಿನಲ್ಲಿ? ಅದನ್ನಾದರೂ ಸರ್ಕಾರ ಯೋಚನೆ ಮಾಡಬೇಕಲ್ಲವೇ? ಅದನ್ನು ಮಾಡಲೇ ಇಲ್ಲ ಇವರು 600 ರೂಗಳನ್ನು ಕೊಡುತ್ತಿದ್ದ ಹಾಗೇ, ಕೊಬ್ಬರಿ ಬೆಲೆಯನ್ನು 4,100 ರಿಂದ 3,400 – 3,200 ರೂಗಳಿಗೆ ಇಳಿಸಿಬಿಟ್ಟರು ರೈತರ ಹತ್ತಿರ 260 ರೂಗಳನ್ನು ಡಿಡಕ್ಟ್ ಮಾಡಿದರು ನಮಗೆ C S T ಇಷ್ಟು ಹೋಗುತ್ತದೆ, ಸೆಸ್ ಇಷ್ಟು ಹೋಗುತ್ತದೆ, ಇಷ್ಟು ದಿವಸ ನಾವು ಅದನ್ನೆಲ್ಲ ಕಟ್ಟುತ್ತಿರಲಿಲ್ಲ ಎಂದು ಹೇಳಿ ವರ್ತಕರು ರೈತರಿಂದ ವಾಪಸ್ಸು ತೆಗೆದುಕೊಂಡರು ತಾವು 600 ರೂಗಳನ್ನು ಡಿಕ್ಲೇರ್ ಮಾಡಿದ ಮೇಲೆ, 250 ರೂಗಳಿಂದ 300 ರೂಗಳವರೆಗೆ ಡಿಡಕ್ಟ್ ಮಾಡಿದ್ದಾರೆ ಇದಾದ ಮೇಲೆ ನಫೆಡ್ ಓಪನ್ ಮಾಡಿದರು 26ನೇ ತಾರೀಖು ನಫೆಡ್ ಕೊಬ್ಬರಿ ಕೊಳ್ಳುತ್ತದೆ ಎಂದರೆ, 25ನೇ ತಾರೀಖು 4,200 ರೂಗಳಿಗೆ ಕೊಬ್ಬರಿಯನ್ನು ತಿಪಟೂರಿನಲ್ಲಿ ಕೊಳ್ಳುತ್ತಾರೆ ಎಂದರೆ ಈ ಸರ್ಕಾರ ಬದುಕಿದೆಯೇ? ಸತ್ತಿದೆಯೇ? ನೀವು ಇನ್ನೂ ಇದ್ದೀರಾ? The day NAFED had started purchases, ಅಲ್ಲಿ 4,200 ರೂ ಗಳಿಗೆ ಟೆಂಡರ್ ಹಾಕುತ್ತಾರೆ ಅಲ್ಲಿಯವರೆಗೆ ನೀವು ಹೋಗುತ್ತೀರಿ, ನಿಮ್ಮ ಡಿ ಸಿ ಹೋಗುತ್ತಾರೆ ಇವರೆಲ್ಲ ಕಾಡಿ ಬೇಡಿ 5 ಮೀಟಿಂಗ್‌ಗಳನ್ನು ಮಾಡಿದರೂ ಒಬ್ಬ ವರ್ತಕನನ್ನೂ ನೀವು ತಾಕೀತು ಮಾಡಲು ಆಗಲಿಲ್ಲ, ಕೊಬ್ಬರಿ ಖರೀದಿಸಲು ಆಗಲಿಲ್ಲ ಆವತ್ತು ಹೇಗೆ ತೆಗೆದುಕೊಂಡರು? ನಫೆಡ್ ಓಪನ್

ಆಗಲು ಬಿಡಕೂಡದು ಎಂದು ಶಾಮೀಲಾಗಿ ಕೆಲಸ ಮಾಡುತ್ತಾರೆ ತಾವು ಬಿಗಿಯಾಗದೇ ಹೋದರೆ, ರೈತರು ನಿರ್ನಾಮವಾಗಿ ಬಿಡುತ್ತಾರೆ

ಅಧ್ಯಕ್ಷರು ಇದು ಒಂದು ವಿಷ ವೃತ್ತ ಅದನ್ನು ಯಾವ ರೀತಿಯಲ್ಲಿ ಸರಿಪಡಿಸಬಹುದು ಎನ್ನುವ ಬಗ್ಗೆ ಏನಾದರೂ ಸಲಹೆ ಇದ್ದರೆ ಹೇಳಿ

ಶೀ ಜೆ ಸಿ ಮಾಧುಸ್ವಾಮಿ : ನಿಮಗೆ ನಂಬರ್ ಟೂ ಕಂಟೋಲ್ ಮಾಡಲಿಕ್ಕೆ ಆಗಲಿಲ್ಲ CST, C Form ತೆಗೆದುಬಿಡಿ ಎಂದು ನಾನು ಇಲ್ಲಿ ಆವತ್ತು ಬೇಡಿಕೊಂಡೆ ಯಾರೂ C Formನಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ, ಯಾರೂ CST ಕೊಡುತ್ತಿಲ್ಲ ಮರ್ಯಾದೆಯಾಗಿ ಬಾಳುವ ವರ್ತಕರ್ಯಾರಾದರೂ, ನಾನು C Form ಕೊಡಬೇಕು, CST ಕೊಡಬೇಕು ಎಂದು ಹೋದರೆ, ವ್ಯಾಪಾರ ಮಾಡುವುದನ್ನು ನಿಲ್ಲಿಸಿ, 90 – 100 ಜನರು ಕೊಬ್ಬರಿ ಕೊಳ್ಳುವ ಕಡೆ ಇಬ್ಬರು, ಮೂವರಿಗೆ ಬಂದು ನಿಂತುಕೊಂಡರೆ ಮಾರುಕಟ್ಟೆಗಳಲ್ಲಿ ವ್ಯಾಪಾರವಾಗುತ್ತದೆಯೇ? ಇವತ್ತು ತೆಂಗಿನ ಕಾಯಿ ಸುಲಿಯುತ್ತಿದ್ದ ವ್ಯಾಪಾರ ಬಂದ್ ಆಯಿತು ಎಳನೀರು ವ್ಯಾಪಾರ ಬಂದ್ ಆಯಿತು 20–25 ಸಾವಿರ ಚೀಲ ಕೊಬ್ಬರಿ ಬರುವ ಕಡೆ ಲಕ್ಷ ಚೀಲದಷ್ಟು ಕೊಬ್ಬರಿ ಇವತ್ತು ತಿಪಟೂರಿಗೆ ಹರಾಜುಗೋಸ್ಕರ ಬರುತ್ತಿದೆ ಕೊಳ್ಳುವುದಕ್ಕೆ ಯಾರಿಗೆ ಶಕ್ತಿ ಇಲ್ಲ, ಅವರ ಹತ್ತಿರ ದುಡ್ಡು ಎಷ್ಟು ಇರುತ್ತದೋ ಅಷ್ಟಕ್ಕೆ ಕೊಳ್ಳುತ್ತಾರೆ ಇಲ್ಲಿಂದ ರವಾನೆಯಾಗಿ ಅವನು ದುಡ್ಡು ಕೊಟ್ಟ ಮೇಲೆ ಇವರು ಇಲ್ಲಿ payment ಮಾಡಬೇಕಾಗಿದೆ ಇದನ್ನು ಎಲ್ಲಾದರೂ ನೀವು ಯೋಚನೆ ಮಾಡಿದ್ದೀರಾ? ವರ್ತಕರು ಕೊಳ್ಳುವುದಕ್ಕೆ ನೀವು 600 ರೂಪಾಯಿ subsidy ಕೊಡುತ್ತೇವೆಂದು ಸರ್ಕಾರದ ಒಂದು scheme ಮಾಡಿದರೆ, ಎಲ್ಲಾದರೂ ನೀವು ಈ ಬಗ್ಗೆ ಕೇಳಿದ್ದೀರಾ? ನೀವು purchase ಮಾಡುತ್ತೀರಾ? ಅವರ ಅಂಗಡಿಯಲ್ಲಿ ಕೊಳ್ಳುವುದಂತೆ, ಇವರು 600 ರೂಪಾಯಿಗಳನ್ನು ಆ ಚೀಟಿ ಮೇಲೆ ಅವರಿಗೆ pass on ಮಾಡುವುದಂತೆ ಇದು ಸರ್ಕಾರದ ಯೋಜನೆಯೇ? ಯಾವ ಅಧಿಕಾರದಲ್ಲಿ ನೀವು ಅದನ್ನು ಮಾಡಿದಿರಿ? How could you pass on the difference? ನೀವು ಹೇಳಿದ ದಿವಸ ಅರಸೀಕೆರೆಯಲ್ಲಿ 3400 ರೂಪಾಯಿಗಳಿಗೆ ಅಲ್ಲಿ ಹಾಕಿದರು ಇಡೀ ಅರಸೀಕೆರೆ ಬಂದ್ ಆಯಿತು ರಾತ್ರಿ 10 ಗಂಟೆಯವರೆಗೆ strike ಆಯಿತು ನೀವು ಯಾರಾದರೂ ಅಲ್ಲಿಗೆ ಹೋಗಿದ್ದೀರಾ?

(ಗೊಂದಲ)

ಶೀ ವಾಟಾಳ್ ನಾಗರಾಜ್ ಕೊಬ್ಬರಿ ವ್ಯಾಪಾರ ನಾಶವಾಗುತ್ತಿದೆ ತಿಪಟೂರು ನಾಶವಾಗುತ್ತಿದೆ ಇವರು ವ್ಯಾಪಾರಸ್ಥರ ಪರ ಇದ್ದಾರೆಯೇ ಹೊರತು ರೈತರ ಪರ ಇಲ್ಲ

(ಗೊಂದಲ)

ಅಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ದಯಮಾಡಿ ಕೇಳಿ ಪಶ್ನೋತ್ತರ ಕಾಲದಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ ದಯಮಾಡಿ ನಾನು ಹೇಳುವುದನ್ನು ಕೇಳಿ

(ಗೊಂದಲ)

ಶೀ ಜೆ ಸಿ ಮಾಧುಸ್ವಾಮಿ ನಾನು ಹೇಳುವುದನ್ನು ದಯವಿಟ್ಟು ಸ್ವಲ್ಪ ಕೇಳಿ ಒಂದು ವಾರಕ್ಕೆ close ಮಾಡಿಬಿಡುತ್ತೇವೆಂದರು ಒಂದು ತಿಂಗಳವರೆಗೆ subsidy ಕೊಡುತ್ತೇವೆಂದು ಹೇಳುವುದಕ್ಕೆ ನಿಮಗೇನಾಗಿತ್ತು? ಎಲ್ಲರೂ ಮುಗಿಬಿದ್ದುಬಿಟ್ಟರು ಕೊಬ್ಬರಿ ಸುಲಿಯುವುದಕ್ಕೆ ಸಿಗುತ್ತಾರೆಯೇ? ಕೊಬ್ಬರಿ ಒಡೆಯುವುದಕ್ಕೆ ಸಿಗುತ್ತಾರೆಯೇ? ನೀವು declare ಮಾಡಿ ಒಂದು week ನಲ್ಲಿ ನಾವು subsidy close ಮಾಡುತ್ತೇವೆಂದು ಹೇಳುತ್ತಾರಲ್ಲಾ? ಇದು ಸರ್ಕಾರ ನಡೆಸುವ ರೀತಿಯೇ? ಒಂದು ವಾರದೊಳಗೆ ಲಕ್ಷಾಂತರ ಚೀಲ ಕೊಬ್ಬರಿಯನ್ನು ನಾವು ಸುಲಿದು ಒಡೆದು yardಗೆ ತಂದು ಹಾಕುವುದಕ್ಕೆ ಆಗುತ್ತದೆಯೇ? ಎಲ್ಲಿ store ಮಾಡುತ್ತೀರಿ? ಯಾರು tender ಹಾಕುತ್ತಾರೆ? ಆಮೇಲೆ ಇವರು ಹೋಗಿ APMC ಯಲ್ಲಿ ಕುಳಿತುಕೊಂಡು ವರ್ತಕರಿಗೆ command ಮಾಡುತ್ತಾರೆ ಇದು ಎಲ್ಲೂ ನಾವು ಕೇಳಿಲ್ಲ ವರ್ತಕರು 3600 ರೂಪಾಯಿ ಎಂದು tender ಹಾಕಿದರೆ ನಿಮ್ಮ officers 3,750 ಕ್ಕೆ ಹಾಕೆಂದು ಹೇಳುತ್ತಾನೆ Purchase ಮಾಡುವವರು ಯಾರು? ಅವನಿಗೆ ಇಷ್ಟ ಇರುವುದಕ್ಕೆ ಹಾಕುತ್ತಾನೆ ಮಿಕ್ಕಿದ್ದು ಮಾಡುವುದು ನಿಮ್ಮ ಕೆಲಸವಲ್ಲವೇ? ಏನೂ ಗೊತ್ತಿಲ್ಲ ಇವರು yard ಗೆ ಹೋಗಿ 3,750ಕ್ಕೆ ತಿದ್ದು tender ಹಾಕು ಎಂದು ಹೇಳುವುದು ನಿಮಗೆ ಅಧಿಕಾರವಿದೆಯೇ? Tender ತಿದ್ದಿಸುವುದಕ್ಕೆ ತಮಗೆ ಅಧಿಕಾರವೇ ಇಲ್ಲ ಯಾವ ಕಾನೂನಿನಲ್ಲಿ ತಿದ್ದುತ್ತೀರಿ? ನೀವು ಹೋಗಿ ಟೆಂಡರ್‌ನಲ್ಲಿ ಇಷ್ಟಕ್ಕೇ ಹಾಕು ಎಂದು ಹೇಳುವುದಕ್ಕೆ ನೀವೇನು ವ್ಯಾಪಾರಸ್ಥರೇ? ಎಲ್ಲಾ ಆದಮೇಲೆ ನೀವು ಕೊಡುತ್ತೀರಾ?

ಶೀ ಜಿ ವಿ ಶೀರಾಮರೆಡ್ಡಿ ಈ ಸರ್ಕಾರ ಕೊಬ್ಬರಿ ಬೆಳೆಯತಕ್ಕಂಥ ರೈತರ ಬಗ್ಗೆ ಮಾತಿಗೆ ತಪ್ಪಿದಂಥ ಸರ್ಕಾರ ಇದು ಆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸಭೆ ಕರೆದಿದ್ದರು ನಾನು ಸಹ ಆ ಸಭೆಗೆ ಹಾಜರಾಗಿದ್ದೆನು ಮಂತ್ರಿಗಳಾದಂಥ ಮಾನ್ಯ ದರ್ಶನಾಪುರರವರು ಆ ಸಭೆಯಲ್ಲಿ ಇದ್ದರು ವಲ್ಲರು ಸಭೆಯಲ್ಲಿ ಇದ್ದಾಗ ನಾವು 4775 ರೂಪಾಯಿಗಳಿಗೆ ತೆಗೆದುಕೊಳ್ಳುತ್ತೇವೆಂದು ಮುಖ್ಯ ಮಂತ್ರಿಗಳು ಸ್ವತ ತೀರ್ಮಾನ ಮಾಡಿ ಹೇಳಿದರು 4775 ರೂಪಾಯಿಗಳನ್ನು ಕೊಡಲು ಸರ್ಕಾರ ತೀರ್ಮಾನ ಮಾಡಿದೆ ಎಂದು ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ದರ್ಶನಾಪುರರವರೇ ಹೊರಗೆ ಬಂದು ಪತ್ರಿಕಾ ಮಿತರಿಗೆಲ್ಲ ಹೇಳಿದರು ಇದು ಚಾಮುಂಡೇಶ್ವರಿ ಕ್ಷೇತದ ಚುನಾವಣೆಗೆ ಮೊದಲು ಆದಂಥದ್ದು ಇದೇನಾಯಿತೋ ನಮಗೆ ಗೊತ್ತಿಲ್ಲ ಚಾಮುಂಡೇಶ್ವರಿ ಕ್ಷೇತದ ಚುನಾವಣೆ ಮುಗಿದ ತಕ್ಷಣ 2ನೇ ಸಲ ಇನ್ನೂ ಸಹ ನೀವು ಹೇಳಿದರತೆ ಜಾರಿ ಮಾಡಿಲ್ಲವೆಂದು ನಾನೂ ಸೇರಿಂದಂತೆ ರೈತರು ಮುಖ್ಯಮಂತ್ರಿಗಳ ಹತ್ತಿರ ಹೋದರೆ, ನಾವು ಆ ರೀತಿ ಹೇಳಲೇ ಇಲ್ಲ ಎಂದು ಹೇಳಿಬಿಟ್ಟರು

ಇದೇನು ಸರ್ಕಾರವೇ? ಒಬ್ಬ ಮುಖ್ಯಮಂತಿ ಅಧ್ಯಕ್ಷತೆಯಲ್ಲಿ ನಡೆದಂಧ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ, ತುಮಕೂರು DC office ನಲ್ಲಿ ಆದಂಧದು, ಅದಕ್ಕೆ ಮೊದಲು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು meeting ಮಾಡಿದ್ದರು

(ಗೊಂದಲ)

ಅಧ್ಯಕ್ಷರು ಮಾನ್ಯ ಶೀರಾಮರೆಡ್ಡಿಯವರೇ, ಪಶ್ನೋತ್ತರ ವೇಳೆಯಲ್ಲಿ ಈ ತರಹ ಎಲ್ಲ ಮಾತನಾಡಿದರೆ ಆಗುವುದಿಲ್ಲ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಅಲ್ಲದಿದ್ದರೆ ಮಾನ್ಯ ಮಂತಿಗಳು ಎಲ್ಲರನ್ನು ಕರೆದು ಸಮಗವಾಗಿ ಚರ್ಚೆ ಮಾಡಿ ಸರಿಪಡಿಸಲಿ (ಗೊಂದಲ) ಪ್ರಶ್ನೋತ್ತರ ಕಾಲದಲ್ಲಿ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ

(ಗೊಂದಲ)

ಶೀ ಜೆ ಸಿ ಮಾಧುಸ್ವಾಮಿ ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ಈ ಬಗ್ಗೆ half an hour ಚರ್ಚೆಗ ಅವಕಾಶ ಮಾಡಿ ಕೊಡುತ್ತೇನೆ

ಜಲನಿರ್ಮಲ ಯೋಜನೆ

54(24) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯ ಸರ್ಕಾರ ಜಲ ನಿರ್ಮಲ ಯೋಜನೆಗೆ ಪಡೆದಿರುವ ಸಾಲದ ಮೊತ್ತವೆಷ್ಟು,

ಆ) ಈವರೆಗೆ ಖರ್ಚಾದ ಹಣವೆಷ್ಟು , ಎಷ್ಟು ಹಂತಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆ ,

ಇ) ಕೈಗೆತ್ತಿಕೊಂಡಿರುವ ಮೊದಲನೆಯ ಹಂತದಲ್ಲಿರುವ ಕಾಮಗಾರಿಗಳಿಗೆ ಖರ್ಚಾದ ಹಣವೆಷ್ಟು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು ನೀಡುವುದು) ,

ಈ) ಎರಡನೇಯ ಹಂತದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಖರ್ಚಾದ ಹಣವೆಷ್ಟು (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು) ?

ಶ್ರೀ ಎಸ್ ಎ ರವೀಂದ್ರ ನಾಥ (ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಜಲ ನಿರ್ಮಲ ಯೋಜನೆಯು ಒಟ್ಟು ರೂ 929 67 ಕೋಟಿಗಳ ಯೋಜನೆಯಾಗಿದ್ದು, ವಿಶ್ವಬ್ಯಾಂಕ್‌ನಿಂದ ರೂ 728 59 ಕೋಟಿಗಳ ನೆರವನ್ನು ಪಡೆಯಲಾಗಿರುತ್ತದೆ

ಆ) ಯೋಜನಾ ಪ್ರಾರಂಭದಿಂದ ಡಿಸೆಂಬರ್–2006 ಮಾಸಾಂತ್ಯದವರೆಗೂ ರೂ 511 35 ಕೋಟಿಗಳನ್ನು ಕುಡಿಯುವ ನೀರು ಸರಬರಾಜು, ಗ್ರಾಮೀಣ ಆಂತರಿಕ ರಸ್ತೆ ಮತ್ತು ಚರಂಡಿ, ಗ್ರಾಮ